ಮೂಲ ದಾವಾ ನಂ. 81/2016

ಪಿ. ಡಬ್ಲುಃ 2

ಸಾಕ್ಷಿಯನ್ನು ದಿನಾಂಕ: 03-02-2024 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ ಎಸ್. ವಿ. ಎ. ವಕೀಲರಿಂದಃ**

ಹನುಮಂತ ನಾಗಪ್ಪ ಗೌಡ ಇವರು ಮದ್ಯಪಾನ ಮಾಡಿ ಬಿದ್ದಿದ್ದನ್ನು ನೋಡಿದರು ಸಹಾ ನಾವು ಮನೆಗೆ ಕರೆದುಕೊಂಡು ಹೋಗಿ ಉಪಚಾರ ಮಾಡಿದ್ದು ಇರುವುದಿಲ್ಲ. ಆತ ಸಾಯುವರೆಗೂ ಆ ರೀತಿ ಮದ್ಯಪಾನ ಮಾಡಿ ಬಿದ್ದಿದ್ದನ್ನು ನಾನು ನೋಡಿರುತ್ತೇನೆ. ನಾನು ಹೋಗಿ ಅವನಿಗೆ ಮದ್ಯಪಾನ ಮಾಡಬೇಡ ಎಂದು ಹೇಳಿರುತ್ತೇನೆ. ಆತ ಮೃತಪಟ್ಟ 2-3 ತಿಂಗಳ ನಂತರ ಆತ ಮೃತಪಟ್ಟ ಬಗ್ಗೆ ನಮಗೆ ಗೊತ್ತಾಗಿರುತ್ತದೆ. ಅವರು ಮೃತಪಟ್ಟ ನಂತರ ನಾನು, ನನ್ನ ತಾಯಿ ಅವರ ವಾರಿಸುದಾರರು ಎಂದು ಅರ್ಜಿಯನ್ನು ನೀಡುವುದು ನಮಗೆ ಗೊತ್ತಿರಲಿಲ್ಲ. ಸಾಕ್ಷಿ ಮುಂದುವರಿದು ನಂತರ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ವಂಶವೃಕ್ಷ ಮಾಡಲು ಅರ್ಜಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ನಾವು ಕೊಟ್ಟಿರುವುದಿಲ್ಲ, ಆ ಬಗ್ಗೆ ನಮಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಮತ್ತು ನನ್ನ ತಾಯಿಯ ರೇಷನ್ ಕಾರ್ಡ ನಮ್ಮ ಅಜ್ಜಿಯ ಮನೆಯಾದ ಬೇರೊಳ್ಳಿಯ ವಿಳಾಸದಲ್ಲಿದೆ. ಅದೇ ರೀತಿ ಚುನಾವಣಾ ಗುರುತಿನ ಚೀಟಿಯಲ್ಲಿ ಸಹಾ ನನ್ನ ಮತ್ತು ನನ್ನ ತಾಯಿಯ ವಿಳಾಸ ಬೇರೊಳ್ಳಿಯಲ್ಲಿದೆ. ಆ ಸಮಯದಲ್ಲಿ ಆಧಾರ ಕಾರ್ಡ ಇರಲಿಲ್ಲ. ಸಾಕ್ಷಿ ಮುಂದುವರಿದು ನನ್ನ ತಾಯಿ ಮೃತಪಡುವಾಗ ಆಕೆಯನ್ನು ಕಾಸರಕೋಡು ಗ್ರಾಮಕ್ಕೆ ಕರೆದುಕೊಂಡುಬಂದಿದ್ದು ಆಗ ಕಾಸರಕೋಡಿನ ವಿಳಾಸ ಮಾಡಿಸಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ಮತ್ತು ನನ್ನ ತಾಯಿಗೆ ಸಂಬಂಧಿಸಿದ ರೇಷನ್ ಕಾರ್ಡ, ಆಧಾರ ಕಾರ್ಡ ಮತ್ತು ಚುನಾವಣಾ ಗುರುತಿನ ಚೀಟಿ ನನ್ನ ಹತ್ತಿರ ಇದೆ. ಅವುಗಳನ್ನು ನ್ಯಾಯಾಲಯಕ್ಕೆ ನೀಡಲು ನನಗೆ ತೊಂದರೆ ಇಲ್ಲ.

ನನಗೆ 23 ನೇ ವಯಸ್ಸಿನಲ್ಲಿ ಮದುವೆಯಾಗಿರುತ್ತದೆ. ನನಗೆ ಇಬ್ಬರು ಮಕ್ಕಳು ಇರುತ್ತಾರೆ. ಒಬ್ಬ ಪಿ.ಯು.ಸಿ ಮತ್ತು ಒಬ್ಬ 7 ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ಒಬ್ಬರಿಗೆ 30 ವರ್ಷ ಇನ್ನೊಬ್ಬರಿಗೆ 32 ವರ್ಷ ವಯಸ್ಸಾಗಿದೆ. ಅವರು ಕಾಸರಕೋಡಿನಲ್ಲಿ ವಿದ್ಯಾಭ್ಯಾಸ ಮಾಡಿರುತ್ತಾರೆ. ಬೇರೊಳ್ಳಿ ಗ್ರಾಮದಲ್ಲಿ ನಾವು ಪಟಗಾರ ಗೌಡ ವಂಶಸ್ಥರಾಗಿರುತ್ತೇವೆ. ಪಟಗಾರ ಗೌಡ ವಂಶಸ್ಥರಲ್ಲಿ ಹನುಮಂತ ಗೌಡ ಎನ್ನುವ ಹೆಸರಿನ ಅನೇಕ ಜನರು ಇರುತ್ತಾರೆ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ಸಾಮಾನ್ಯವಾಗಿ ಶಿವಮ್ಮ ಎಂದು ಹೆಸರು ಇಡುತ್ತಾರೆ ಎಂದರೆ ಸರಿ. ಖರ್ವಾ ಗ್ರಾಮದಲ್ಲಿ ಹನುಮಂತ ನಾಗಪ್ಪ ಗೌಡ ಎನ್ನುವವರು ಅನೇಕ ಜನ ಇದ್ದಾರೆ ಎಂದರೆ ಇರಬಹುದು, ನನಗೆ ಗೊತ್ತಿಲ್ಲ. ನಿಪಿ. 15 ರ ದಾಖಲೆ ನಮಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ. ನಿಪಿ. 15 ರಲ್ಲಿರುವ ಹನುಮಂತ ಗೌಡ ಮತ್ತು 2 ನೇ ಪ್ರತಿವಾದಿಯ ಗಂಡ ಹನುಮಂತ ಗೌಡ ಬೇರೆ ಬೇರೆ ಮತ್ತು ಅವರಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನಾನು ಹುಟ್ಟಿದ ನಂತರ ನನ್ನ ಕುರಿತು ಜನ್ಮ ದಾಖಲೆಯನ್ನು ಮಾಡಿಸಿರುವುದಿಲ್ಲ. 2 ನೇ ಪ್ರತಿವಾದಿಯ ಗಂಡ ಹನುಮಂತ ನಾಗಪ್ಪ ಗೌಡನಿಗೂ ಮತ್ತು ನನಗೂ ಮತ್ತು ನನ್ನ ತಾಯಿಗೂ ಯಾವದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಹನುಮಂತ ನಾಗಪ್ಪ ಗೌಡ 1 ನೇ ವಾದಿಯನ್ನು ಯಾವತ್ತೂ ಮದುವೆಯಾಗಿದ್ದು ಇಲ್ಲ ಎಂದರೆ ಸರಿಯಲ್ಲ. ಹನುಮಂತ ನಾಗಪ್ಪ ಗೌಡ 2 ನೇ ಪ್ರತಿವಾದಿಯನ್ನು ಮದುವೆಯಾಗಿದ್ದು ಅವರಿಗೆ 1 ನೇ ಪ್ರತಿವಾದಿ ಜನಿಸಿರುತ್ತಾರೆ ಎಂದರೆ ಸಾಕ್ಷಿ ಅವರು 1 ನೇ ವಾದಿಯನ್ನು ಮದುವೆಯಾಗಿದ್ದು ನಂತರ 2 ನೇ ಪ್ರತಿವಾದಿಯನ್ನು ಮದುವೆಯಾಗಿರುತ್ತಾರೆ ಎಂದು ನುಡಿಯುತ್ತಾರೆ. ಹನುಮಂತ ನಾಗಪ್ಪ ಗೌಡ ಮತ್ತು ನನಗೂ ಯಾವದೇ ಸಂಬಂಧ ಇಲ್ಲದೇ ಇರುವ ಕಾರಣ ದಾವಾ ಆಸ್ತಿಯಲ್ಲಿ ನನಗೆ ಯಾವದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ 3, 4, 5 ನ್ನು 2 ನೇ ಪ್ರತಿವಾದಿ 3 ರಿಂದ 6 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಹಾಗಾದರೆ 3 ರಿಂದ 6 ನೇ ಪ್ರತಿವಾದಿಯರನ್ನು ಈ ದಾವೆಯಲ್ಲಿ ಏಕೆ ಸೇರಿಸಿದ್ದೀರಿ ಎಂದರೆ ಸಾಕ್ಷಿ ಅವರು ಖರೀದಿ ಮಾಡಿದ ಬಗ್ಗೆ ನಂತರ ಗೊತ್ತಾಗಿದ್ದು ಅದಕ್ಕೆ ಸೇರಿಸಿದ್ದೇವೆ ಎಂದು ನುಡಿಯುತ್ತಾರೆ. ಈ ವಿಚಾರ ಅವರು ಖರೀದಿ ಮಾಡಿದ 4-5 ವರ್ಷಗಳ ನಂತರ ಗೊತ್ತಾಗಿರುತ್ತದೆ. ಅವರು ತಾವು ಖರೀದಿ ಮಾಡಿದ ಜಾಗದ ಸುತ್ತಲೂ ಕಂಪೌಂಡನ್ನು ಹಾಕಿ ಮಣ್ಣನ್ನು ತುಂಬಿ ಅಭಿವೃದ್ದಿಪಡಿಸಿದ್ದಾರೆ ಎಂದರೆ ಸರಿ. ಆ ರೀತಿ ಮಾರಾಟ ಮಾಡಿದ ವಿಚಾರ ಗೊತ್ತಾದ ಮೇಲೆ ಸಂಬಂಧಿತ ಇಲಾಖೆಯಲ್ಲಿ ನಾವು ಯಾವದೇ ತಕರಾರು ಸಲ್ಲಿಸಿರುವುದಿಲ್ಲ. ಸಾಕ್ಷಿ ಮುಂದುವರಿದು ನಾವು ಮೌಖಿಕವಾಗಿ ವಿಚಾರಿಸಿರುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ಈ ವಿಚಾರವನ್ನು ನಾವು 2 ನೇ ಪ್ರತಿವಾದಿಯ ಹತ್ತಿರ ವಿಚಾರಿಸಿರುತ್ತೇವೆ ಎಂದು ನುಡಿಯತ್ತಾರೆ. ಅದಕ್ಕೆ ಅವರು ನೋಡುವಾ ಎಂದು ಉತ್ತರಿಸಿರುತ್ತಾರೆ. ಆ ನಂತರ ನಾವು ಯಾವದೇ ಕ್ರಮ ತೆಗೆದುಕೊಂಡಿರುವುದಿಲ್ಲ, ಈ ದಾವೆಯನ್ನು ಹೂಡಿರುತ್ತೇವೆ. ದಾವಾ ಆಸ್ತಿಯಲ್ಲಿ ನನಗೆ ಯಾವದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಹನುಮಂತ ನಾಗಪ್ಪ ಗೌಡನ ವಿಧಿಬದ್ಧ ಹೆಂಡತಿಯಾಗಿದ್ದು 1 ನೇ ಪ್ರತಿವಾದಿ ಆತನ ವಿಧಿಬದ್ಧ ಮಗಳು ಆಗಿರುತ್ತಾಳೆ ಎಂದರೆ ಸಾಕ್ಷಿ ನನ್ನ ತಾಯಿ ಕೂಡಾ ವಿಧಿಬದ್ಧ ಹೆಂಡತಿ ಎಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರೇ ಕಾನೂನುಬದ್ಧ ಮಾಲಿಕರಾದ ಕಾರಣ ಕುಟುಂಬದ ಗರ್ಜಿನ ಸಲುವಾಗಿ ಕೆಲವು ಆಸ್ತಿಗಳನ್ನು 3 ರಿಂದ 6 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ ಎಮ್. ಎಮ್. ಜಿ. ವಕೀಲರಿಂದಃ</u>**

3, 5, 6 ನೇ ಪ್ರತಿವಾದಿಯರು ಖರೀದಿ ಮಾಡಿದ ಜಾಗದಲ್ಲಿ ಏನೇನು ಮಾಡಿದ್ದಾರೆ ಎಂದು ನಾನು ವಿಚಾರಿಸಿರುತ್ತೇನೆ. ಸಾಕ್ಷಿ ಮುಂದುವರಿದು 5 ನೇ ಪ್ರತಿವಾದಿ ತಾನು ಖರೀದಿ ಮಾಡಿದ ಜಾಗದಲ್ಲಿ ಮನೆ ಕಟ್ಟಿದ್ದಾರೆ ಮತ್ತು ತೋಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. 6 ನೇ ಪ್ರತಿವಾದಿ ತಾನು ಖರೀದಿ ಮಾಡಿದ ಜಾಗದಲ್ಲಿ ಬಿನ್‌ಶೇತ್ಕಿ ಮಾಡಿಸಿ ಸುಮಾರು 25 ಲಕ್ಷ ರೂ ಖರ್ಚು ಮಾಡಿ ಅಂಗಡಿಗಳನ್ನು ಕಟ್ಟಿಸಿ ಅದರ ಮೇಲೆ ಮನೆ ಕಟ್ಟಿಸಿ ವಾಸವಿದ್ದಾನೆ ಎಂದರೆ ಸರಿಯಲ್ಲ. 3 ರಿಂದ 6 ನೇ ಪ್ರತಿವಾದಿಯರು ತಾವು ಖರೀದಿ ಮಾಡಿದ ಜಾಗದಲ್ಲಿ ಸುತ್ತಲೂ ಕಂಪೌಂಡ ಕಟ್ಟಿ ಮಣ್ಣನ್ನು ಹಾಕಿ ಸಮತಟ್ಟು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಖರೀದಿ ಮಾಡಿದ ಕ್ರಯಪತ್ರವನ್ನು ರದ್ದತಿ ಕೋರಿ ದಾವೆ ಹೂಡದೇ ಈ ದಾವೆ ಮಾಡಿರುವುದು ಸರಿಯಲ್ಲ ಎಂದರೆ ಸರಿಯಲ್ಲ. ಖರೀದಿ ಮಾಡಿದವರು ಬಾವಿ ತೋಡಿಸಿದ್ದು, ವಿದುತ್ ಸಂಪರ್ಕ ಪಡೆದಿದ್ದು ಮತ್ತು ಇತರೇ ಸವಲತ್ತು ಪಡೆದಿರುತ್ತಾರೆ ಎಂದರೆ ಸಾಕ್ಷಿ ನಮಗೆ ಗೊತ್ತಿಲ್ಲದ ಹಾಗೆ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. 3 ರಿಂದ 6 ನೇ ಪ್ರತಿವಾದಿಯನ್ನು ಸತಾಯಿಸುವ ಸಲುವಾಗಿ ಈ ದಾವೆ ಹೂಡಿದ ಕಾರಣ ಈ ದಾವೆ ನಡೆಯುವುದಿಲ್ಲ ಎಂದರೆ ಸರಿಯಲ್ಲ.

( ಮೇಲಿನ ಪಾಟೀ ಸವಾಲನ್ನು ಉಳಿದ ಪಾಟೀಸವಾಲಾಗಿ ಅನುಮೋದಿಸುತ್ತಾರೆ)

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.